**ಸಾಕ್ಷಿಗೆ ದಿನಾಂಕ: 14.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು:**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ.GCR ರವರಿಂದ:**

1) ನಾನು ಈ ಪ್ರಕರಣದಲ್ಲಿ **1** ನೇ ಅರ್ಜಿದಾರಳಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) **ಪ್ರಥಮ ವರ್ತಮಾನ ವರದಿ** ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು, **ಪೋಲಿಸರಿಗೆ ನೀಡಿರುವ ದೂರನ್ನು ನಿ.ಪಿ.2** ಎಂದು, **ಸ್ಥಳ ಪಂಚನಾಮೆಯನ್ನು** ನಿ.ಪಿ.**3** ಎಂದು, **ಕಚ್ಚಾ ನಕ್ಷೆಯನ್ನು** ನಿ.ಪಿ.**4** ಎಂದು, ಅಮಾನತ್ತು ಪಂಚನಾಮೆಯನ್ನು ನಿ.ಪಿ.**5** ಎಂದು, ಐಎಂವಿ ವರದಿಯನ್ನು ನಿ.ಪಿ.**6** ಎಂದು, ಶವ ತನಿಖಾ ವರದಿಯನ್ನು ನಿ.ಪಿ.**7** ಎಂದು, ಶವ ಪರೀಕ್ಷಾ ವರದಿಯನ್ನು ನಿ.ಪಿ.**8** ಎಂದು, ಮತ್ತು ಅಂತಿಮ ವರದಿಯನ್ನು ನಿ.ಪಿ.**9** ಎಂದು ಗುರುತಿಸಿದೆ.

3) **ಐ.ಎಂ.ವಿ ಕಾಯ್ದೆ ಕಲಂ 133** ರ ಅಡಿಯಲ್ಲಿ ನೀಡಿರುವಂತಹ **ನೋಟಿಸ್** ಅನ್ನು ನಿ.ಪಿ.**10** ಎಂದು ಮತ್ತು **ಆ ನೋಟಿಸಿಗೆ ನೀಡಿರುವಂತಹ**

**ಉತ್ತರವನ್ನು** ನಿ.ಪಿ.**11** ಎಂದು ಗುರುತಿಸಿದೆ.

**ಸೂಚನೆಃ** ನಿ.ಪಿ.1 ರಿಂದ ನಿ.ಪಿ.11 ಎಂದು ಗುರುತು ಆಗಿರುವ ದಾಖಲೆಗಳು ಕನಕಪುರ ಸಂಚಾರ ಪೋಲಿಸ್ ಠಾಣೆಯವರು ನೀಡಿರುವಂತಹ ಯಥಾ ನಕಲುಗಳು ಆಗಿವೆ.

4) ಈಗ ಸಾಕ್ಷಿದಾರರು ತಮ್ಮ ಮತ್ತು ಇತರೆ ಅರ್ಜಿದಾರರ ಮತ್ತು ಅಪಘಾತದಲ್ಲಿ ಮರಣ ಹೊಂದಿದ ಗಿರೀಶ ರವರ ಮೂಲ ಆಧಾರ್ ಕಾರ್ಡ್ ದಾಖಲೆ ಮತ್ತು ಗರೀಶ ರವರ ಮರಣ ಪ್ರಮಾಣ ಪತ್ರ, ಚಾಲನಾ ಪರವಾನಗಿ ಮತ್ತು **4** ನೇ ಅರ್ಜಿದಾರರ ಜನನ ಪ್ರಮಾಣ ಪತ್ರ ಮತ್ತು ಶಾಲಾ ದಾಖಲಾತಿಗಳ ಧೃಡೀಕರಣ ಪತ್ರಗಳು ಮತ್ತು ಇದೇ ದಾಖಲೆಗಳ ಫೋಟೋ ಪ್ರತಿಗಳನ್ನು ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಗಳನ್ನು ಮತ್ತು ಫೋಟೋ ಪ್ರತಿಗಳನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಗಳನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಗಳನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ಫೋಟೋ ಪ್ರತಿಗಳನ್ನು ನಿ.ಪಿ.**12** ರಿಂದ ನಿ.ಪಿ.**24** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಗಳನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

5) ಆದ ಕಾರಣದಿಂದ ಪ್ರಾರ್ಥನೆಯಂತೆ ನಮಗೆ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.